ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸರ್ಕಾರ ಈಗಾಗಲೇ ಹಲವಾರು ಭಾರಿ ಭರವಸೆ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ನಿಜ

ಆ) ವಿಷಯವು ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಶಿವಾಜಿನಗರ ಕ್ಷೇತ್ರದ ಕಾಮಗಾರಿಗಳು.

೨೯೧೨(೩೬೫೦)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ೨೦೦೧-೦೨ನೇ ಸಾಲಿನಲ್ಲಿ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ಕೈಗೊಂಡಿರುವ ಕಾಮಗಾರಿಗಳು ಯಾವುವು?

ಆ) ಈ ಕಾಮಗಾರಿಗಳಿಗೆ ಮಂಜೂರಾದ ಹಣವೆಷ್ಟು?

ಇ) ಈ ಕಾಮಗಾರಿಗಳ ಪ್ರಗತಿ ಏನು? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ೨೦೦೧-೦೨ನೇ ಸಾಲಿನಲ್ಲಿ ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖಾ ವತಿಯಿಂದ ೫೫ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರಸಕ್ತ ಆಯವ್ಯಯದಲ್ಲಿ ಈ ಕಾಮಗಾರಿಗಳಿಗೆ ಒಟ್ಟು ೧೫೯.೦೦ ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಇ) ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	೨೦೦೧-೦೨ನೇ ಸಾಲಿಗೆ ನಿಗದಿ ಪಡಿಸಿರುವ ಅನುದಾನ	೨೦೦೧-೦೨ನೇ ಸಾಲಿನಲ್ಲಿ ಆರ್ಥಿಕ ಪ್ರಗತಿ	ಭೌತಿಕ ಪ್ರಗತಿ
		(ರೂ. ಲಕ್ಷಗಳಲ್ಲಿ)			
೧.	ಬೆಂಗಳೂರಿನ ಇನ್‌ಫೆಂಟ್ರಿ ರಸ್ತೆಯಲ್ಲಿ ಆಡಳಿತಾತ್ಮಕ ತರಬೇತಿ ಹಾಗೂ ಸಂಶೋಧನಾ ಸಂಸ್ಥೆ ಕಟ್ಟಡ ನಿರ್ಮಾಣ	೯೦.೦೦	೪೫.೦೦	೦.೦೫	ನೀರು ಸರಬರಾಜು ಮತ್ತು ನೈರ್ಮಲೀಕರಣ ಕೆಲಸ ಚಾಲ್ತಿಯಲ್ಲಿರುತ್ತದೆ.
೨.	ರಾಜಭವನದಲ್ಲಿ ದಕ್ಷಿಣ ಭಾಗದ ಕಟ್ಟಡವನ್ನು ನವೀಕರಣಗೊಳಿಸುವ ಕಾಮಗಾರಿಗಳು	೭೦.೦೦	೧೫.೦೦	-	ರಾಜಭವನದ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.
೩.	ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಆಪರೇಶನ್ ಥಿಯೇಟರ್ ಕಟ್ಟಡ ನಿರ್ಮಾಣ	೪೬೫.೦೦	-	-	ಮೂಲ ಕಟ್ಟಡದ ಕೆಲಸ ಮುಗಿದಿದ್ದು ಎರಡನೇ ಲಿಫ್ಟ್ ಅಳವಡಿಸುವ ಕಾಮಗಾರಿಯ ಕೆಲಸ ಪ್ರಗತಿಯಲ್ಲಿರುತ್ತದೆ.
೪.	ಶೈತ್ಯಾಗಾರವನ್ನೊಳಗೊಂಡ ಶವಾಗಾರ ಕಟ್ಟಡ ನಿರ್ಮಾಣ ಹಾಗೂ ಒಂದು ವಿಶೇಷ ವಾರ್ಡ್ ನಿರ್ಮಾಣ	೧೧೬.೦೦	-	-	ಶೈತ್ಯಾಗಾರವನ್ನೊಳಗೊಂಡ ಶವಾಗಾರ ಕಟ್ಟಡ ನಿರ್ಮಾಣದ ಕೆಲಸ ಮುಗಿದಿದೆ ಹಾಗೂ ವಿಶೇಷ ವಾರ್ಡ್ ನಿರ್ಮಾಣಕ್ಕೆ ೨ ಬಾರಿ ಟೆಂಡರ್ ಪ್ರಕಟಣೆ ಹೊರಡಿಸಿದ್ದರೂ ಯಾವುದೇ ಗುತ್ತಿಗೆದಾರರು

					ಸ್ಪಂದಿಸಿರುವದಿಲ್ಲ ಈ ಕಾಮಗಾರಿಗೆ ಮಾರ್ಪಡಿಸಿದ ಅಂದಾಜು ಪಟ್ಟಿಯನ್ನು ತಯಾರಿಸುವ ಹಂತದಲ್ಲಿರುತ್ತದೆ.
೫.	ಕೆ.ಆರ್.ವೃತ್ತದ ಬಳಿ ಇರುವ ಸಾರ್ವಜನಿಕ ಶಿಕ್ಷಣ ಆಯುಕ್ತರ ಕಛೇರಿಗೆ ಪೂರಕ ಕಟ್ಟಡ ನಿರ್ಮಾಣ	೯೯.೦೦	೯೯.೦೦	-	ಠೇವಣಿ ಸಂಗ್ರಹಣೆ ಅಡಿಯಲ್ಲಿ ಕಾಮಗಾರಿಯು ಮಂಜೂರಾಗಿದ್ದು ಟೆಂಡರ್ ಆಧಾರದಡಿಯಲ್ಲಿ ಕೈಗೆತ್ತಿಕೊಂಡು ತಳಪಾಯಕ್ಕೆ ಕಾಂಕ್ರೀಟು ಹಾಕುವ ಕೆಲಸ ಪ್ರಗತಿಯಲ್ಲಿರುತ್ತದೆ.